ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ ಗುಲಬರ್ಗಾ.

ಸಂ/ಕಂ/ಸಿಬ್ಬಂದಿ-1/85/2009-10 ದಿನಾಂಕ: 30.11.2009.

## : ಪ್ರ ಕ ಟ ಣೆ :

**ವಿಷಯ: ಗುಲಬರ್ಗಾ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಾಧಿಕಾರಿಗಳ ಹುದ್ದೆಗಳ ನೇರ ನೇಮಕಾತಿ ಪರಿಶೀಲನಾ ಪಟ್ಟಿ ಪ್ರಕಟಿಸುವ ಕುರಿತು.**

ಉಲ್ಲೇಖ: 1. ಸರ್ಕಾರದ ಅಧಿಸೂಚನೆ ಸಂಖ್ಯೆ ಕಂಇ/299/ಬಿಎಸ್‌ಸಿ/2009 ದಿನಾಂಕ: 08.09.2009.

2. ಈ ಕಾರ್ಯಾಲಯದ ಅಧಿಸೂಚನೆ ಸಮ ಸಂಖ್ಯೆ ದಿನಾಂಕ: 01.10.2009.

---

ಗುಲಬರ್ಗಾ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಾಧಿಕಾರಿಗಳ ಹುದ್ದೆಗಳಿಗೆ ನೇರ ನೇಮಕಾತಿಗಾಗಿ ಉಲ್ಲೇಖ (2) ರ ಆದೇಶದ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಆನ್ ಲೈನ್ ಮೂಲಕ ಹಾಗೂ ಈ ಕಾರ್ಯಾಲಯದ ಸ್ವೀಕೃತವಾದ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಅಭ್ಯರ್ಥಿಗಳ ನೇಮಕಾತಿ ಕುರಿತು ತೈಯ್ಯಾರಿಸಲಾದ ಪರಿಶೀಲನಾ ಪಟ್ಟಿ ಜಿಲ್ಲಾಧಿಕಾರಿಗಳು ಗುಲಬರ್ಗಾ ರವರ ಕಾರ್ಯಾಲಯದಲ್ಲಿ ಹಾಗೂ ವೈಬ್ ಸೈಟ್‌ನಲ್ಲಿ ಪ್ರಚುರಪಡಿಸಲಾಗಿದೆ. ಸದರಿ ಪರಿಶೀಲನಾ ಪಟ್ಟಿ ಆಕ್ಷೇಪಣಾ ಮತ್ತು ತಕರಾರುಗಳನ್ನು ಸಲ್ಲಿಸಲು ದಿನಾಂಕ: 01.12.2009 ರಿಂದ 14.12.2009ರ ವರೆಗೆ ಅವಧಿ ನಿಗಧಿಪಡಿಸಲಾಗಿದೆ. ಆಕ್ಷೇಪಣಾ ಮತ್ತು ತಕರಾರುಗಳನ್ನು ಲಿಖಿತ ರೂಪದಲ್ಲಿ ನೇರವಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸಲು ತಿಳಿಸಿದೆ. ಅವಧಿ ಮುಗಿದ ನಂತರ ಆಕ್ಷೇಪಣಾ ಮತ್ತು ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ.

ಪರೀಶಿಲನಾ ಪಟ್ಟಿಯಂತೆ ಅರ್ಹ ಅಭ್ಯರ್ಥಿಗಳು ದಿನಾಂಕ:12-12-2009 ರಂದು(ಜನರಲ್ ಮೇರಿಟ್ ಅಭ್ಯರ್ಥಿಗಳಿಗೆ) ಹಾಗೂ ದಿನಾಂಕ:13-12-2009ರಂದು(ಜನರಲ್ ಮೇರಿಟ್ ಅಭ್ಯರ್ಥಿಗಳಿಗೆ ಹೊರತುಪಡಿಸಿ) ಬೆಳಿಗ್ಗೆ 10-00 ಗಂಟೆಗೆ ಡಾ:ಎಸ್.ಎಂ.ಪಂಡಿತ ರಂಗಮಂದಿರ, ಜಗತ್ ವೃತ್ತದ ಹತ್ತಿರ ಗುಲಬರ್ಗಾದಲ್ಲಿ ದಾಖಲಿಸಬೇಕು. ನಿಗದಿಪಡಿಸಿದ ದಿನಾಂಕದಂದು ಯಾವುದೇ ಕಾರಣಕ್ಕೆ ಅಭ್ಯರ್ಥಿಯು ಗೈರು ಹಾಜರಾಗಿದಲ್ಲಿ ನಂತರದಲ್ಲಿ ಅವರನ್ನು ನೇಮಾಕತಿಗಾಗಿ ಪರಿಗಣಿಸಲಾಗುವುದಿಲ್ಲ ಪರೀಶಿಲನಾ ಸಮಯದಲ್ಲಿ ಬರುವ ಅಭ್ಯರ್ಥಿಗಳಿಗೆ ಈ ಕಾರ್ಯಾಲಯದಿಂದ ಪ್ರಯಾಣ ಭತ್ಯೆ ಇತ್ಯಾದಿ ನೀಡಲಾಗುವುದಿಲ್ಲ. ಪರೀಶಿಲನಾ ಪಟ್ಟಿಯಲ್ಲಿ ಕಾಣಿಸಿದ ಅಭ್ಯರ್ಥಿಗಳು ದಾಖಲೆಗಳ ಪರೀಶಿಲನೆ ಬಗ್ಗೆ ಮಾತ್ರ ಸೀಮಿತವಾಗಿದ್ದು ಅರ್ಹ ಅಭ್ಯರ್ಥಿಗಳನ್ನು ಮಾತ್ರ ನೇಮಕಾತಿಗಾಗಿ ಪರಿಗಣಿಸಲಾಗುವುದು. ಪರೀಶಿಲನಾ ಸಮಯದಲ್ಲಿ ಅಭ್ಯರ್ಥಿಗಳು ಹಾಜರಪಡಿಸಬೇಕಾದ ದಾಖಲೆಗಳು ಈ ಕೆಳಗಿನಂತಿವೆ.

1. ಇತ್ತೀಚಿನ 4 ಪಾಸಪೋರ್ಟ ಭಾವಚಿತ್ರಗಳು
2. ಆನ್ ಲೈನ್ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಮೂಲ ದಾಖಲಾತಿಗಳೊಂದಿಗೆ ಒಂದು ಸೆಟ್ ದೃಢೀಕೃತ ಪ್ರಮಾಣ ಪತ್ರವನ್ನು ಹಾಜರಪಡಿಸಬೇಕು ಆನ್ ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ಬಗ್ಗೆ(Acknowledgement) ಪಾವತಿ ಹಾಗೂ ಹಣ ತುಂಬಿದ ಬಗ್ಗೆ ಬ್ಯಾಂಕಿನಿಂದ ಪಡೆದ ಮೂಲ ಚಲನ ಪ್ರತಿಯನ್ನು ಹಾಜರ ಪಡಿಸಬೇಕು.
3. ಮೂಲ ಮತ್ತು ದೃಢೀಕೃತ ದ್ವಿತೀಯ ಪಿ.ಯು.ಸಿ. ಅಥವಾ 12ನೇ ತರಗತಿ ಯ ಸೆಂಟ್ರಲ್ ಬೋರ್ಡ ಆಫ್ ಸೆಕೆಂಡರಿ ಎಜುಕೇಶನ್(ಸಿ.ಬಿಎಸ್.ಸಿ) ಅಥವಾ ಐ.ಸಿಎಸ್.ಸಿ ಪರೀಕ್ಷೆ ಯ ಪ್ರಮಾಣ ಪತ್ರ.
4. ವಯಸ್ಸಿನ ಬಗ್ಗೆ ಜನ್ಮ ದಿನಾಂಕವನ್ನು ನಮೂದಿಸಲು ಮೂಲ ಹಾಗೂ ದೃಢೀಕೃತ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯ ಪತ್ರ/ವರ್ಗಾವಣೆ ಪತ್ರ/ಜನನ ದಿನಾಂಕವನ್ನು ತೋರಿಸಲು ಸಂಚಿತ ದಾಖಲೆ ಉದ್ಧೃತ ಭಾಗ ಪರೀಶಿಲನೆಗೆ ಹಾಜರಪಡಿಸಬೇಕ.
5. ಜಾತಿಯ ಬಗ್ಗೆ ಮೀಸಲಾತಿ ಬಯಸುವ ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ನಗದಿತ ನಮೂನೆಯಲ್ಲಿ ಪ್ರಮಾಣ ಪತ್ರ.

6. ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳ ರೀತ್ಯಾ ಮೂಲ ಹಾಗೂ ದೃಢೀಕೃತ ಪ್ರಮಾಣ ಪತ್ರ ಜಾಜರಪಡಿಸಬೇಕು.
7. ಕನ್ನಡ ಮಾಧ್ಯಮ ಮೀಸಲಾತಿ ಬಯಸುವ ಅಭ್ಯರ್ಥಿಗಳು 1ನೇ ತರಗತಿಯಿಂದ 10ನೇ ತರಗತಿಯವರಿಗೆ ವ್ಯಾಸಂಗ ಮಾಡಿದ ಬಗ್ಗೆ ನಿಗದಿತ ನಮೂನೆಯಲ್ಲಿ ಮೂಲ ಹಾಗೂ ದೃಢೀಕೃತ ಪ್ರಮಾಣ ಪತ್ರ ಹಾಜರ ಪಡಿಸಬೇಕು.
8. ಗ್ರಾಮ ಲೆಕ್ಕಿಗ ಹುದ್ದೆಗೆ ನಿಗದಿಪಡಿಸಿದಂತೆ ಅಭ್ಯರ್ಥಿಯು ಕುಷ್ಠ ರೋಗದಿಂದ ಗುಣಮುಖರಾದವರು ಶ್ರವಣದೋಷವುಳ್ಳವರು ಹಾಗೂ ಮಾನಸಿಕ ಅಸ್ವಸ್ಥತೆಯನ್ನು ಹೊಂದಿದವರನ್ನು ಮಾತ್ರ ನೇಮಕಾತಿಗೆ ಪರಿಗಣಿಸಲಾಗುವುದರಿಂದ ಈ ಬಗ್ಗೆ ನಿಗಧಿತ ನಮೂನೆಯಲ್ಲಿ ಮೂಲ ಹಾಗೂ ದೃಢಿಕೃತ ಪ್ರಮಾಣ ಪತ್ರ ಹಾಜರು ಪಡಿಸಬೇಕು.
9. ಮಾಜಿ ಸೈನಿಕರ ಮೀಸಲಾತಿ ಬಯಸುವ ಅಭ್ಯರ್ಥಿಗಳು ಸೈನಿಕ ಸೇವೆಯಿಂದ ಬಿಡುಗಡೆಯಾದ / ಮುಕ್ತಿ ಹೊಂದಿದ ಬಗೆಗಿನ ಪ್ರಮಾಣ ಪತ್ರ ಹಾಜರುಪಡಿಸಬೇಕು
10. ಯೋಜನಾ ನಿರಾಶ್ರಿತ ಮೀಸಲಾತಿ ಬಯಸುವ ಅಭ್ಯರ್ಥಿಗಳು ತಹಸೀಲ್ದಾರರಿಂದ ಪಡೆದ ಪ್ರಮಾಣ ಪತ್ರ ಹಾಜರು ಪಡಿಸಬೇಕು.
11. ವಿಧವಾ ಅಭ್ಯರ್ಥಿಯಾದಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ ಹಾಜರ ಪಡಿಸಬೇಕು.

ಸದಸ್ಯ ಕಾರ್ಯದರ್ಶಿಗಳು
ಗ್ರಾಮಲೆಕ್ಕಾಧಿಕಾರಿ ನೇಮಕಾತಿ ಆಯ್ಕೆ ಸಮಿತಿ
ಹಾಗೂ ಅಪರ ಜಿಲ್ಲಾಧಿಕಾರಿಗಳು ಗುಲಬರ್ಗಾ.

ಪ್ರತಿ :

1. ಪ್ರಧಾನ ಕಾರ್ಯದರ್ಶಿಗಳು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ಪ್ರಧಾನ ಕಾರ್ಯದರ್ಶಿಗಳು ಕಂದಾಯ ಇಲಾಖೆ (ಸೇವೆಗಳು) ಬಹುಮಹಡಿಗಳ ಕಟ್ಟಡ ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
3. ಪ್ರಾದೇಶಿಕ ಆಯುಕ್ತರು ಗುಲಬರ್ಗಾ ವಿಭಾಗ, ಗುಲಬರ್ಗಾ ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
4. ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಗುಲಬರ್ಗಾ ಇವರಿಗೆ ಸೂಕ್ತ ಕ್ರಮಕ್ಕಾಗಿ
5. ಜಿಲ್ಲೆಯ ಎಲ್ಲಾ ಸಹಾಯಕ ಆಯುಕ್ತರಿಗೆ ಮತ್ತು ತಹಸೀಲ್ದಾರರಿಗೆ ಪರಿಶೀಲನಾ ಪಟ್ಟಿಯನ್ನು ತಮ್ಮ ಕಾರ್ಯಾಲಯದಲ್ಲಿ ಸೂಚನಾ ಫಲಕದಲ್ಲಿ ಪ್ರಕಟಿಸುವ ಕುರಿತು ಸೂಚಿಸಿ ಕಳುಹಿಸಲಾಗಿದೆ.
6. ಈ ಕಾರ್ಯಾಲಯದ ಸೂಚನಾ ಫಲಕಕ್ಕೆ
7. ಹೆಚ್ಚುವರಿ ಪ್ರತಿ ಶಾಖಾ ಕಡತಕ್ಕೆ.

ಸದಸ್ಯ ಕಾರ್ಯದರ್ಶಿಗಳು
ಗ್ರಾಮಲೆಕ್ಕಾಧಿಕಾರಿ ನೇಮಕಾತಿ ಆಯ್ಕೆ ಸಮಿತಿ
ಹಾಗೂ ಅಪರ ಜಿಲ್ಲಾಧಿಕಾರಿಗಳು ಗುಲಬರ್ಗಾ

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಗುಲಬರ್ಗಾ

ಅಭ್ಯರ್ಥಿಗಳಿಗೆ ವಿಶೇಷ ಸೂಚನೆ:

ಗುಲಬರ್ಗಾ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಾಧಿಕಾರಿ ಹುದ್ದೆಗಳ ನೇರ ನೇಮಕಾತಿಗಾಗಿ ಈ ಕಚೇರಿಯ ಅಧಿಸೂಚನೆ ಸಂಖ್ಯೆ: ಕಂ/ಸಿಬ್ಬಂದಿ-1/85/2009-10 ದಿನಾಂಕ:01-10-2009 ರನ್ವಯ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು.

ಅದರಂತೆ ಈ ಕಾರ್ಯಾಲಯಕ್ಕೆ ಸ್ವೀಕೃತವಾದ ಅರ್ಜಿಗಳನ್ನು (1:3) ಅನುಪಾತದಲ್ಲಿ ಪರೀಶಿಲನಾ ಪಟ್ಟಿಯನ್ನು ಈ ಕೆಳಗಿನಂತೆ ತಯ್ಯಾರಿಸಿ ಪ್ರಕಟಿಸಲಾಗಿದೆ.

ಇದು ಕೇವಲ ಪರೀಶಿಲನಾ ಪಟ್ಟಿ ಆಗಿದ್ದು, ಆಯ್ಕೆ/ಅಂತಿಮ ಪಟ್ಟಿ ಎಂದು ಅಭ್ಯರ್ಥಿಗಳು ಭಾವಿಸಬಾರದು.

ಹೆಚ್ಚಿನ ವಿವರಗಳಿಗಾಗಿ:

www.gulbarga.kar.nic.in **website** ವಿಕ್ಷಿಸಲು ತಿಳಿಸಿದೆ.

ಡಾ. ವಿಶಾಲ್ 30/11/09

(ಡಾ: ವಿಶಾಲ್. ಆರ್)

ಜಿಲ್ಲಾಧಿಕಾರಿಗಳು, ಗುಲಬರ್ಗಾ